## ಮುಂಜಾಗ್ರತ ಕ್ರಮಗಳು

- ನಿಮಾಹರಿಯನ್ನು ಹಾಕಿದ ಮೇಲೆ ಗಿಡಗಳಿಗೆ ನೀರು ಹಾಯಿಸಬೇಕು.
- ಮಣ್ಣಿನ ಇಂಗಾಲದ ಅಂಶವನ್ನು ಕಾಪಾಡಲು ಕೊಟ್ಟಿಗೆ ಗೊಬ್ಬರವನ್ನು ಬಳಸಿ.
- ಮಣ್ಣಿನಲ್ಲಿ ತೇವಾಂಶ ಶೇಕಡಾ 40ಕ್ಕಿಂತ ಕಡಿಮೆಯಾಗದಂತೆ ಕಾಪಾಡಬೇಕು.

## ಅನುಕೂಲತೆಗಳು

- ನಿಮಾಹರಿಯು ಬೇರಿನ ಗಂಟುರೋಗ ನಿವಾರಿಸುವುದಲ್ಲದೆ ಪರಿಸರಸ್ನೇಹಿ ತಾಂತ್ರಿಕತೆಯಾಗಿದ್ದು ಮಣ್ಣಿನಲ್ಲಿರುವ ಸೂಕ್ಷ್ಮಾಣು ಜೀವಿಗಳಿಗೆ ಯಾವುದೇ ತೊಂದರೆಯನ್ನುಂಟು ಮಾಡುವುದಿಲ್ಲ.
- ನಿಮಾಹರಿಯನ್ನು ಬೇರು ಸುಲಭವಾಗಿ ಹೀರಿಕೊಂಡು ಜಂತುಹುಳುಗಳು ವಂಶಾಭಿವೃದ್ಧಿಯನ್ನು ಬೇರಿನಲ್ಲಿ ಹಾಗೂ ಮಣ್ಣಿನಲ್ಲಿ ತಡೆಗಟ್ಟುತ್ತದೆ.
- ಇದರ ಶೇಖರಣಾವಧಿ 2 ವರ್ಷ.
- ಬಳಸುವ ವಿಧಾನ ಸುಲಭವಾಗಿರುವುದರಿಂದ ಶೇಕಡಾ 50ರಷ್ಟು ಶ್ರಮ ಕಡಿಮೆಯಾಗುತ್ತದೆ.






ನಿಮಾಹರಿ ಬಳಸುವ ಮೊದಲು



ನಿಮಾಹರಿ ಬಳಸಿದ ನಂತರ

ವಿಷಯ:
ವಿ. ನಿಶಿತ ನಾಯ್ಕ್ ಮತ್ತು ಪ್ರತೀಶ್ ಕುಮಾರ್ ಪಿ.ಎಂ.

ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಿ

**ನಿರ್ದೇಶಕರು**
ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ
(ISO 9001 : 2008 ರಿಂದ ದೃಢೀಕೃತಗೊಂಡಿದೆ)
ಕೇಂದ್ರ ರೇಷ್ಮೆ ಮಂಡಳಿ, ಜವಳಿ ಖಾತೆ, ಭಾರತ ಸರ್ಕಾರ,
ಶ್ರೀರಾಂಪುರ, ಮೈಸೂರು 570 008
ದೂರವಾಣಿ: 0821–2362757, 2362406
ಫ್ಯಾಕ್ಸ್: 0821–2362845
ವೆಬ್: www.csrtimys.res.in
ಇ–ಮೇಲ್: csrtimys.csb@nic.in

Copies: 1000 February 2016 Design & Layout: J. Justin Kumar

# ನಿಮಾಹರಿ

## ಹಿಪ್ಪುನೇರಳೆ ಬೇರಿನ ಗಂಟುರೋಗ ನಿಯಂತ್ರಿಸುವ ಸಸ್ಯಜನ್ಯ ಉತ್ಪನ್ನ



**ಕೇಂದ್ರ ರೇಷ್ಮೆ ಸಂಶೋಧನಾ ಮತ್ತು ತರಬೇತಿ ಸಂಸ್ಥೆ**
(ISO 9001 : 2008 ರಿಂದ ದೃಢೀಕೃತಗೊಂಡಿದೆ)
ಕೇಂದ್ರ ರೇಷ್ಮೆ ಮಂಡಳಿ, ಜವಳಿ ಖಾತೆ,
ಭಾರತ ಸರ್ಕಾರ, ಶ್ರೀರಾಂಪುರ, ಮೈಸೂರು–570 008

ಹಿಪ್ಪುನೇರಳೆ ಬೆಳೆಯಲ್ಲಿ ಮಣ್ಣಿನ ಮುಖಾಂತರ ಹರಡುವ ರೋಗಗಳಲ್ಲಿ ಬೇರಿನ ಗಂಟುರೋಗವು ಬಹಳ ಅಪಾಯಕಾರಿ. ಈ ರೋಗವು ಮೆಲ್ಯೈಡೋಗೈನೆ ಇನ್‌ಕಾಂಗ್ನಿಟ ಎಂಬ ಜಂತುಹುಳುಗಳಿಂದ ಹರಡುತ್ತದೆ. ಬೇರುಗಂಟು ರೋಗದಿಂದ ಶೇಕಡಾ 20ರಷ್ಟು ಹಿಪ್ಪುನೇರಳೆ ಬೆಳೆಯ ಇಳುವರಿಯು ಕಡಿಮೆಗೊಂಡು, ರೇಷ್ಮೆ ಹುಳುಗಳಿಗೆ ರೇಷ್ಮೆ ಉತ್ಪಾದಿಸಲು ಅವಶ್ಯಕವಾದ ಪ್ರೋಟಿನಿನ ಅಂಶವನ್ನು ಕಡಿಮೆಗೊಳಿಸುತ್ತದೆ. ಈ ರೋಗವು ಮರಳು ಮಿಶ್ರಿತ ಕೆಂಪು ಮಣ್ಣಿನಲ್ಲಿ, ನೀರಾವರಿ ಸೌಲಭ್ಯವಿರುವಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಈ ರೋಗವು ಬೇರಿಗೆ ಹಾನಿಯನ್ನುಂಟು ಮಾಡಿ ಅನೇಕ ತರಹದ ಮಣ್ಣಿನ ಮುಖಾಂತರ ಹರಡುವ ರೋಗಗಳಿಗೆ ತುತ್ತಾಗುವಂತೆ ಮಾಡುತ್ತದೆ.

## ಲಕ್ಷಣಗಳು

ಬೇರುಗಂಟು ರೋಗದ ಬಾಧೆ ಹೆಚ್ಚಾದಾಗ ಗಿಡದ ಬೆಳವಣಿಗೆ ಕುಂಠಿತಗೊಂಡು ಎಲೆಯು ತಿಳಿಹಳದಿ ಬಣ್ಣಕ್ಕೆ ತಿರುಗುತ್ತದೆ. ಬೇರಿನಲ್ಲಿ ಸಣ್ಣ ಸಣ್ಣ ಗಂಟುಗಳು ಕಂಡುಬರುತ್ತದೆ. ಹೊಸ ಗಂಟುಗಳು ಬೇರಿನ ಬಣ್ಣಹೊಂದಿದ್ದು ಹಳೆಯ ಗಂಟುಗಳು ಕಪ್ಪುಬಣ್ಣ ಹೊಂದಿರುತ್ತವೆ. ಜಂತುಹುಳುಗಳ ಬಾಧೆಯಿಂದ ನೀರು ಹಾಗೂ ಪೋಷಕಾಂಶಗಳು ಗಿಡಕ್ಕೆ ಸರಬರಾಜುಗುವ ಅಂಗಾಂಶಗಳು ಹಾನಿಗೊಂಡು ಕ್ರಮೇಣ ಗಿಡವು ಸಾಯುತ್ತದೆ.

## ನಿಂಯಂತ್ರಣ ಕ್ರಮ

ಈ ಹಿಂದೆ ಬೇವಿನ ಹಿಂಡಿ, ಪ್ಯುರಡಾನ್, ಬಯೋನೀಮಾ ಮುಂತಾದವುಗಳನ್ನು ಬಳಸಿ ರೋಗವನ್ನು ಹತೋಟಿಪಡಿಸಲಾಗುತ್ತಿತು. ಬಂಯೋನೀವಾದ ಶೇಖರಣಾವಧಿ ಬಹಳ ಕಡಿಮೆಯಾಗಿರುವುದರಿಂದ ಮಾರುಕಟ್ಟೆಯಲ್ಲಿ ಲಭ್ಯವಿಲ್ಲ. ಬೇವಿನ ಹಿಂಡಿಯೊಂದರ ಬಳಕೆಯಿಂದ ಬೇರು ಗಂಟುರೋಗದ ಸಂಪೂರ್ಣ ನಿಯಂತ್ರಣ ಸಾಧ್ಯವಿಲ್ಲ. ನಿರಂತರ ರಾಸಾಯನಿಕಗಳ ಬಳಕೆ ಮಣ್ಣಿನಲ್ಲಿರವ ಉಪಯುಕ್ತ ಸೂಕ್ಷ್ಮಾಣುಜೀವಿಗಳನ್ನು ನಾಶಗೊಳಿಸುವುದರಿಂದ ಬೇರು ಗಂಟುರೋಗದ ನಿಯಂತ್ರಣಕ್ಕೆ ಪರಿಸರಸ್ನೇಹಿ ತಾಂತ್ರಿಕತೆಯ ಅವಶ್ಯಕತೆಯನ್ನು ಮನಗೊಂಡು ನಿಮಾಹರಿಯನ್ನು ಅಭಿವೃದ್ಧಿಪಡಿಸಲಾಗಿದೆ.

ನಿಮಾಹರಿ ಎಂಬ ಪರಿಸರಸ್ನೇಹಿ ಜಂತುನಾಶಕವನ್ನು ಬೇರುಗಂಟು ರೋಗದ ಹತೋಟಿಗೆ ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯವರು ಸಂಶೋಧಿಸಿದ್ದಾರೆ. ಇದರಲ್ಲಿ ಶೇಕಡಾ 75ರಷ್ಟು ಸಸ್ಯಜನ್ಯ ಉತ್ಪನ್ನ ಮತ್ತು ಶೇಕಡಾ 25ರಷ್ಟು ರಾಸಾಯನಿಕವಿದೆ.





## ನಿಮಾಹರಿಯ ಫಲಿತಾಂಶ

ನಿಮಾಹರಿಯನ್ನು ಬಳಸಿದಾಗ ಸಂಶೋಧನಾಲಯದಲ್ಲಿ ಶೇಕಡಾ 82ರಷ್ಟು ರೋಗ ನಿವಾರಣೆಯಾಗಿ ಶೇಕಡಾ 22ರಷ್ಟು ಸೊಪ್ಪಿನ ಇಳುವರಿ ಹೆಚ್ಚಾಗಿರುತ್ತದೆ. ರೈತರಲ್ಲಿ ಇದು ಶೇಕಡಾ 82-84 ರಷ್ಟು ರೋಗ ನಿವಾರಣೆ ಮಾಡಿ ಶೇಕಡಾ 22-24ರಷ್ಟು ಸೊಪ್ಪಿನ ಇಳುವರಿಯನ್ನು ಹೆಚ್ಚಿಸಿದೆ. ಈ ತಾಂತ್ರಿಕತೆಯನ್ನು ಬಳಸಿದರೆ ವರ್ಷಕ್ಕೆ ಹೆಕ್ಟೇರಿಗೆ ಸುಮಾರು 12190 ರೂಪಾಯಿ ಲಾಭವಾಗುತ್ತದೆ. ಖರ್ಚು ವೆಚ್ಚದ ಅನುಪಾತ 1:2.2.





## ಬಳಸುವ ವಿಧಾನ

- ಮಧ್ಯಮ ಪ್ರಮಾಣದಲ್ಲಿ ಬೇರುಗಂಟು ರೋಗದ ಬಾಧೆ ಇದ್ದರೆ (50 ಕ್ಕಿಂತ ಕಡಿಮೆ ಗಂಟುಗಳಿದ್ದಾಗ) ವರ್ಷಕ್ಕೆ ಎರಡು ಬಾರಿ ನಿಮಾಹರಿಯನ್ನು ಬಳಸಬೇಕು.
- ರೋಗಬಾಧೆ ತೀವ್ರವಾಗಿದ್ದರೆ (50 ಕ್ಕಿಂತ ಹೆಚ್ಚು ಗಂಟುಗಳಿದ್ದಾಗ) ವರ್ಷಕ್ಕೆ ಮೂರುಬಾರಿ ನಿಮಾಹರಿಯನ್ನು ಬಳಸಬೇಕು.
- ನಿಮಾಹರಿಯನ್ನು ಬಳಸುವಾಗ ಎಕರೆಗೆ 16 ಕೆ. ಜಿ. ನಿಮಾಹರಿಯನ್ನು 160 ಕೆ. ಜಿ. ಕೊಟ್ಟಿಗೆ ಗೊಬ್ಬರದ ಜೊತೆ ಮಿಶ್ರಮಾಡಿ ಗಿಡದ ಎರಡು ಬದಿಗಳಲ್ಲಿ 15 ಸೆಂ. ಮೀ. ಆಳದ ಸಣ್ಣಹಳ್ಳ ಮಾಡಿ ನಿಮಾಹರಿ ಮಿಶ್ರಣವನ್ನು ಹಾಕಿ ಮಣ್ಣು ಮುಚ್ಚಿ ನೀರು ಹಾಯಿಸಬೇಕು.
- ಮೊದಲ ಬಾರಿ ನಿಮಾಹರಿಯನ್ನು ಬಳಸಿದ 70-80 ದಿನಗಳ ನಂತರ ಎರಡನೆ ಬಾರಿ ಬಳಸಬಹುದು.
- ಎರಡನೆ ಬಾರಿ ನಿಮಾಹರಿಯನ್ನು ಬಳಸಿದ 140-150 ದಿನಗಳನಂತರ ಮೂರನೆ ಬಾರಿ ಬಳಸಬಹುದು.

